# ಕ್ರೋಮ್‌ನಲ್ಲಿ ಹೊಸ 'ಆ್ಯಡ್ ಪ್ರೈವೆಸಿ'

■ **ಶಶಿಕುಮಾರ್ ಸಿ.**

'ಆ್ಯಡ್ ಪ್ರೈವೆಸಿ' ಅಪ್‌ಡೇಟೆಡ್ ಫೀಚರ್ ಪರಿಚಯಿಸಿರುವ ಗೂಗಲ್‌ನ ಕ್ರೋಮ್, ಆ ಮೂಲಕ ಬಳಕೆದಾರರ ಮಾಹಿತಿ ಗೌಪ್ಯತೆಗೆ ಹೆಚ್ಚಿನ ಆದ್ಯತೆ ನೀಡಿದೆ.

ಹಳೆಯ ವರ್ಷನ್‌ನಲ್ಲಿ ಜಾಹೀರಾತು ಕಂಪನಿಗಳು ಕ್ರೋಮ್ ಬಳಸುವವರಿಂದ ಮಾಹಿತಿ ಸಂಗ್ರಹಿಸಿ, ತನ್ನ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದವು. ಇದರ ಮೇಲೆ ಬಳಕೆದಾರರಿಗೆ ಯಾವುದೇ ರೀತಿಯ ನಿಯಂತ್ರಣವಿರಲಿಲ್ಲ. ಜಾಹೀರಾತು ಕಂಪನಿಗಳ ಮಾಹಿತಿ ಸಂಗ್ರಹಿಸುವ ಹಪಹಪಿತನಕ್ಕೆ ಕಡಿವಾಣ ಹಾಕುವ ಸಲುವಾಗಿ ಗೂಗಲ್ ಈ ಫೀಚರ್ ಪರಿಚಯಿಸಿದ್ದು, ಕ್ರೋಮ್ ಬಳಕೆದಾರರ ಮಾಹಿತಿ ಸಂಗ್ರಹದ ಮೇಲಿನ ನಿಯಂತ್ರಣವನ್ನೂ ಬಳಕೆದಾರರಿಗೇ ನೀಡಿದೆ.



ಆ್ಯಡ್ ಪ್ರೈವೆಸಿ ಲೋಗೊ

### ಸೆಟ್ಟಿಂಗ್ಸ್ ಹೇಗೆ?

- ಕ್ರೋಮ್ ಅಪ್ಲಿಕೇಷನ್ ಅಪ್‌ಡೇಟ್ ಮಾಡಿಕೊಳ್ಳಬೇಕು.
- ಆ್ಯಪ್ ತೆರೆದು ಮೆನು ಆಯ್ಕೆಯನ್ನು ಕ್ಲಿಕ್ಕಿಸಿ. ನಂತರ ಸೆಟ್ಟಿಂಗ್ ಆಯ್ದುಕೊಳ್ಳಿ.
- ಹಾಗೇ ಸ್ಕ್ರಾಲ್ ಮಾಡಿ 'ಪ್ರೈವೆಸಿ ಅಂಡ್ ಸೆಕ್ಯೂರಿಟಿ' ಆಯ್ಕೆಯನ್ನು ಒತ್ತಿ. ಇದು ಆನ್‌ಲೈನ್ ಗೌಪ್ಯತೆಯ ವಿವಿಧ ಅಂಶಗಳನ್ನು ನಿಯಂತ್ರಿಸಲು ಅನುವು ಮಾಡಿಕೊಡುತ್ತದೆ.
- ಪ್ರೈವೆಸಿ ಅಂಡ್ ಸೆಕ್ಯೂರಿಟಿ ವಿಭಾಗದಲ್ಲಿ ಆ್ಯಡ್ ಪ್ರೈವೆಸಿ ಆಯ್ಕೆ ಕಾಣಿಸುತ್ತದೆ. ಜಾಹೀರಾತು ಗೌಪ್ಯತೆಯ ಸೆಟ್ಟಿಂಗ್ಸ್‌ಗೆ ಪ್ರವೇಶಿಸಲು ಈ ಆಯ್ಕೆಯನ್ನು ಒತ್ತಿ.

### ಜಾಹೀರಾತು ನಿರ್ವಹಣೆ

ಆ್ಯಡ್ ಪ್ರೈವೆಸಿ ವಿಭಾಗದಲ್ಲಿ ಆನ್ ಅಥವಾ ಆಫ್ ಮಾಡಬಹುದಾದ ಹಲವಾರು ಆಯ್ಕೆಗಳ ಪಟ್ಟಿ ಕಾಣುತ್ತದೆ. ಕ್ರೋಮ್ ಬಳಕೆ ವೇಳೆ ಜಾಹೀರಾತು ಸಂಬಂಧಿತ ಮಾಹಿತಿಯನ್ನು ಅದು ಹೇಗೆ ನಿರ್ವಹಿಸುತ್ತದೆ ಎಂಬುದನ್ನು ಆ ಪಟ್ಟಿಯಿಂದ ತಿಳಿಯಬಹುದು. ಹೀಗಾಗಿ ಇವುಗಳಲ್ಲಿ ಯಾವುದು ಅಗತ್ಯವೋ ಅದನ್ನಷ್ಟೇ ಆನ್ ಮಾಡುವುದು ಒಳಿತು.

ವೆಬ್‌ಸೈಟ್‌ಗಳು ಮತ್ತು ಆ ವೆಬ್‌ಸೈಟ್‌ಗೆ ಎಷ್ಟು ಬಾರಿ ಭೇಟಿ ನೀಡಲಾಗಿದೆ ಎಂಬುದರ ಆಧಾರದ ಮೇಲೆ ಬಳಕೆದಾರರ ಆಸಕ್ತಿಯನ್ನು ಗುರುತಿಸುವ ಕ್ರೋಮ್, ಅದಕ್ಕನುಗುಣವಾಗಿ ಜಾಹೀರಾತನ್ನು ವೈಯಕ್ತೀಕರಿಸುತ್ತದೆ. ಇದೇ ಮಾಹಿತಿಯನ್ನು ಜಾಹೀರಾತು ಕಂಪನಿಗಳೂ ಪಡೆಯುತ್ತವೆ. ಅದರ ಆಧಾರದ ಮೇಲೆ ಪೂರಕವಾದ ಕಂಟೆಂಟ್, ಬಳಕೆದಾರರ ಡಿವೈಸ್‌ಗಳಲ್ಲಿ ಕಾಣುವಂತೆ ಮಾಡಲಾಗುತ್ತದೆ. ಈ ಪ್ರಕ್ರಿಯೆಯನ್ನು ನಿರ್ಬಂಧಿಸುವ ಅವಕಾಶವನ್ನು ಬಳಕೆದಾರರಿಗೆ ಹೊಸ ಫೀಚರ್ ಒದಗಿಸಿದೆ.

ವೆಬ್‌ಸೈಟ್‌ಗಳೊಂದಿಗೆ ಮಾಹಿತಿ ಹಂಚಿಕೊಳ್ಳದಂತೆ ನಿರ್ಬಂಧಿಸಲು ಹೀಗೆ ಮಾಡಿ.

- ಕ್ರೋಮ್‌ನ ಮೆನು ತೆರೆದು 'ಸೆಟ್ಟಿಂಗ್ಸ್' ಆಯ್ಕೆ ಮಾಡಿ. ನಂತರ 'ಪ್ರೈವೆಸಿ ಅಂಡ್ ಸೆಕ್ಯೂರಿಟಿ' ಟ್ಯಾಪ್ ಮಾಡಿ.
- ನಂತರ 'ಆ್ಯಡ್ ಪ್ರೈವೆಸಿ' ಮತ್ತು 'ಆ್ಯಡ್ ಟಾಪಿಕ್ಸ್' ಆಯ್ಕೆ ಕಾಣಿಸುತ್ತದೆ. ಜಾಹೀರಾತು ಆಸಕ್ತಿಗಳನ್ನು ನಿರ್ವಹಿಸಲು 'ಆ್ಯಡ್ ಟಾಪಿಕ್ಸ್' ಮೇಲೆ ಟ್ಯಾಪ್ ಮಾಡಿ.
- 'ಯುವರ್ ಟಾಪಿಕ್ಸ್' ಅಡಿ ಇತ್ತೀಚಿನ ಬ್ರೌಸಿಂಗ್ ಹಿಸ್ಟರಿ ಆಧರಿಸಿ ಕೆಲ ಟಾಪಿಕ್‌ಗಳ ಪಟ್ಟಿ ಕಾಣುತ್ತದೆ. ಇಲ್ಲಿ ನೀವು ನಿರ್ಬಂಧಿಸಲು ಬಯಸುವ ವಿಷಯಗಳನ್ನು ಆಯ್ಕೆ ಮಾಡಿ. ■

# ಎಟಿಎಂನಲ್ಲೂ 'ಯುಪಿಐ' ಬಳಸಿ

ಡೆಬಿಟ್, ಕ್ರೆಡಿಟ್ ಕಾರ್ಡ್ ಇಲ್ಲದೆ ಎಟಿಎಂಗಳಲ್ಲಿ ನಗದು ವಿತ್‌ಡ್ರಾ ಮಾಡುವ ಅವಕಾಶವನ್ನು ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ ಕಲ್ಪಿಸಿದೆ. ಅದಕ್ಕಾಗಿ ಭಾರತದ ಪ್ರಥಮ 'ಯುಪಿಐ ಎಟಿಎಂ' ಈಗ ಚಾಲ್ತಿಗೆ ಬಂದಿದ್ದು, ಈ ವಿಧಾನವನ್ನು ಬಳಸಿಕೊಂಡು ಸಾರ್ವಜನಿಕರು ನಗದನ್ನು ಪಡೆಯಬಹುದು.

ಎನ್‌ಪಿಸಿಐ ಸಹಯೋಗದಲ್ಲಿ ಹಿಟಾಚಿ ಪೇಮೆಂಟ್ ಸರ್ವೀಸಸ್ ಭಾರತದಲ್ಲಿ ಮೊದಲ ಯುಪಿಐ ಎಟಿಎಂ ಸ್ಥಾಪಿಸಿದೆ. ಎಟಿಎಂ ಕಾರ್ಡ್ ಬಳಸದೆಯೇ ಯುಪಿಐ ಆ್ಯಪ್‌ಗಳ ಮೂಲಕ ಎಟಿಎಂ ಕೇಂದ್ರಗಳಲ್ಲಿ ಹಣವನ್ನು ವಿತ್‌ಡ್ರಾ ಮಾಡಬಹುದು.

ಎಸ್‌ಬಿಐ ಸೇರಿದಂತೆ ಕೆಲವು ಸೀಮಿತ ಬ್ಯಾಂಕುಗಳ ಕೆಲವೇ ಕೆಲವು ಎಟಿಎಂಗಳಲ್ಲಿ ಈ ಸೇವೆಯನ್ನು ಕಲ್ಪಿಸಲಾಗಿದೆ. ಆದರೆ ಅದನ್ನು ಬಳಸಲು ಆಯಾ ಬ್ಯಾಂಕ್‌ನ ಆ್ಯಪ್ ಬೇಕಾಗುತ್ತದೆ. ಆದರೆ, ಹಿಟಾಚಿಯ ಯುಪಿಐನ ಎಟಿಎಂನಲ್ಲಿ ಆ್ಯಪ್ ಬಳಸಿ ಹಣ ವಿತ್‌ಡ್ರಾ ಮಾಡಬಹುದು.




ಎಟಿಎಂ ಸೆಂಟರ್‌ಗಳಲ್ಲಿ ಕಾರ್ಡ್ ಸ್ಕಿಮ್ಮಿಂಗ್ (ಎಟಿಎಂ ಕಾರ್ಡ್ ದಾಖಲೆ ಕದಿಯುವುದು) ಸಾಧ್ಯತೆಯ ಅಪಾಯ ಇರುತ್ತದೆ. ಯುಪಿಐನ ಎಟಿಎಂನಿಂದ ಇದು ತಪ್ಪುತ್ತದೆ. ಎಟಿಎಂನ ಪರದೆಯಲ್ಲಿ ಕಾಣುವ ಕ್ಯೂಆರ್ ಕೋಡ್ ಅನ್ನು ಯುಪಿಐನ ಆ್ಯಪ್‌ನಿಂದ ಸ್ಕ್ಯಾನ್ ಮಾಡಿ ಹಣವನ್ನು ಸುಲಭವಾಗಿ ವಿತ್‌ಡ್ರಾ ಮಾಡಬಹುದು.

### ಹಣ ಪಡೆಯುವ ವಿಧಾನ

- ವಿತ್‌ಡ್ರಾ ಮೊತ್ತವನ್ನು ನಮೂದಿಸಬೇಕು.
- ಆಯ್ದ ಮೊತ್ತಕ್ಕೆ ಕ್ಯೂಆರ್ ಕೋಡ್ ಪರದೆಯ ಮೇಲೆ ಮೂಡುತ್ತದೆ.
- ಅದನ್ನು ನಿಮ್ಮ ಯುಪಿಐ ಆ್ಯಪ್‌ಗಳ ಮೂಲಕ ಸ್ಕ್ಯಾನ್ ಮಾಡಬೇಕು.
- ವಹಿವಾಟು ದೃಢೀಕರಣಕ್ಕೆ ನಿಮ್ಮ ಮೊಬೈಲ್‌ನಲ್ಲಿ ಯುಪಿಐ ಪಿನ್ ನಮೂದಿಸಿ.
- ಪಿನ್ ಅಧಿಕೃತಗೊಂಡ ಬಳಿಕ ಎಟಿಎಂನಿಂದ ಹಣ ಹೊರಬರುತ್ತದೆ. ■